ಪ್ರತಿಬಿಂಬ

**PRATIBIMBA –Multidisciplinary Kannada Research Journal of IIMRD**
**ISSN: 2582-2284**
**Vol-4 Issue 3, Nov-Dec, 2022, Pp. 45-51.**
**©*IIMRD*, Mysuru.**
IIMRD JOURNALS

**www.iimrd.com**

# ರಾಜಧಾನಿ 'ಸಗರ' ಶಹಾಪುರವಾದ ದಾರುಣ ಚರಿತ್ರೆ

**ಡಾ. ರಾಮರೆಡ್ಡಿ ಎಸ್. ರಡ್ಡೇರ***

*ಸಹ ಪ್ರಾಧ್ಯಾಪಕರು, ಆರ್.ಟಿ.ಇ.ಎಸ್ ಪದವಿ ಕಾಲೇಜು, ರಾಣೇಬೆನ್ನೂರು. ಹಾವೇರಿ ಜಿಲ್ಲೆ.

***ಸಾರಾಂಶ: (Abstract)***

*'ಸಗರ' ನಾಮ ಭಾರತೀಯ ಸಂಸ್ಕೃತಿಯ ದ್ಯೋತಕ; ಕನ್ನಡಿಗರ ಹೆಗ್ಗಳಿಕೆ; ಕಲ್ಯಾಣ ಕರ್ನಾಟಕದ ಅಸ್ಮಿತೆ; ಸಗರ ನಾಡಿನ ಪ್ರಾಚೀನ ರಾಜಕೀಯ ಸಿರಿದೇವತೆ; ಪೌರಾಣಿಕ ಪ್ರಸಿದ್ಧ ಚಕ್ರವರ್ತಿ ಸಗರನಿಂದ ನಿರ್ಮಿತಿಯೆಂಬ ಪ್ರಖ್ಯಾತಿ; ಸುಮಾರು 800 ವರ್ಷಗಳವರೆಗೆ ಒಂದು ನಾಡಿನ ರಾಜಧಾನಿಯಾಗಿ ಮೆರೆದ ಕೀರ್ತಿಯ ಸ್ಥಳ. ಹೀಗೆಂದು 'ಸಗರ' ನಗರದ ವೈಭವ ಮತ್ತು ಸಂಸ್ಕೃತಿಯನ್ನು ಕುರಿತು ಅಲ್ಲಿನ ಶಾಸನ ಮತ್ತು ಸಾಹಿತ್ಯದಲ್ಲಿ ಭಾವತುಂಬಿ ಬಣ್ಣಿಸಲಾಗಿದೆ. ಆದರೆ ಕೀರ್ತಿಯ ಶಿಖರವೇರಿ ಮೆರೆದ ರಾಜಧಾನಿ 'ಸಗರ' ನಗರ ಮಾತ್ರ ಕಾಲಾಂತರದಲ್ಲಿ ದುರುಳರ ದಾಳಿಗೆ ಸಿಕ್ಕು ಇಂದು 'ಶಹಾಪುರ'ವಾಗಿ ಉಳಿದಿರುವುದು ಇತಿಹಾಸದ ದುರಂತ ಚರಿತ್ರೆಯಲ್ಲಿ ಅಡಗಿದೆ. ಅದರ ಪಕ್ಕದಲ್ಲಿಯೇ ಕಂಡುಬರುವ ಹಳೇ (ಹಾಳಾದ)ಸಗರ, ದೊಡ್ಡಸಗರ ಎಂಬ ಹಳ್ಳಿಗಳು ಮತ್ತು ಅಲ್ಲಿ ಬೆಟ್ಟದ ಮೇಲೆ ಕಂಡುಬರುವ ಪಾಳುಬಿದ್ದ ಕೋಟೆಕೊತ್ತಲುಗಳು ರಾಜಧಾನಿ 'ಸಗರ'ದ ಪಳೆಯುಳಿಕೆಗಳಾಗಿ ಇಂದಿಗೂ ಕಂಡುಬರುತ್ತವೆ. ಇದು ಕರ್ನಾಟಕ ಸಂಸ್ಕೃತಿಯ ಚರಿತ್ರೆಯ ಮರೆತು ಹೋದ ಒಂದು ಭಾಗವಷ್ಟೆ.*

***ಮುಖ್ಯಪದಗಳು: (Keywords)*** *ಸಗರ, ಸಗರನಾಡು, ಶಹಾಪುರ, ಚರಿತ್ರೆ.*

### ಪೀಠಿಕೆ

ಕಲ್ಯಾಣ ಕರ್ನಾಟಕದ ಇಂದಿನ ಯಾದಗೀರ ಜಿಲ್ಲೆಯ ತಾಲೂಕು ಕೇಂದ್ರವಾಗಿರುವ ಶಹಾಪುರದ ಮೂಲ ಮತ್ತು ಪ್ರಾಚೀನ ಹೆಸರೇ 'ಸಗರ'. ಈ 'ಸಗರ' ಸುಮಾರು ಎಂಟು ಶತಮಾನಗಳವರೆಗೆ ಒಂದು ಪ್ರಸಿದ್ಧವಾದ ನಾಡಿನ ರಾಜಧಾನಿಯಾಗಿತ್ತು. ಆಗ ಅದಕ್ಕೆ 'ಸಗರನಾಡು' ಎಂದು ಕರೆಯಲಾಗುತ್ತಿತ್ತು. ಅದು ತನ್ನದೇ ಆದ ಧರ್ಮ, ಸಾಹಿತ್ಯ, ಕಲೆ ಮತ್ತು ಸಂಸ್ಕೃತಿಯ ಕೇಂದ್ರವಾಗಿತ್ತು. ವೈಭವದಿಂದ ಮೆರೆದ ಅದರ ರಾಜಧಾನಿ 'ಸಗರ'ವು 'ಶಹಾಪುರ'ವಾದ ಚರಿತ್ರೆಯು ತುಂಬಾ ದಾರುಣವಾಗಿದೆ.

### ಪೌರಾಣಿಕ ಹಿನ್ನೆಲೆ

ಪೌರಾಣಿಕ ಪ್ರಸಿದ್ಧ ಸಗರ ಚಕ್ರವರ್ತಿಯಿಂದ 'ಸಗರ' ನಗರ ನಿರ್ಮಾಣಗೊಂಡಿದೆ ಎಂಬುದು ಸನಾತನ ನಂಬಿಕೆಯಾಗಿದೆ. ಈ ಕುರಿತು ಗಂಗಾಧರ ಪಂಡಿತ ವಿರಚಿತ 'ಚಂದ್ರಮಾನ'ವೆಂಬ ಕೃತಿಯಲ್ಲಿ ಬರುವ–

*Please cite this article as:* *ಡಾ. ರಾಮರೆಡ್ಡಿ ಎಸ್. ರಡ್ಡೇರ.* (2022). ರಾಜಧಾನಿ 'ಸಗರ' ಶಹಾಪುರವಾದ ದಾರುಣ ಚರಿತ್ರೆ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 4(3). ಪು.ಸಂ. 45–51.*

*"ಸಮ ಭೂಮಧ್ಯ ರೇಖಾಯಾಂ ಶ್ರೀಶೈಲಸ್ಯ ಪಶ್ಚಿಮೇ*
*ಕೃಷ್ಣವೇಣೀ ಬೀಮರತ್ಯಃ ಮಧ್ಯೆ ಜಗತಿ ಪಾವನೇ*
*ಸೂರ್ಯವಂಶ ಕುಲೋತ್ಪನ್ನ ಸಗರೇಣ ವಿನಿರ್ಮಿತಂ*
*ಸಗರಂ ನಗರಂ ನಾಮ ಜಯತ್ಯಾದ್ಯಪಿ ವಿಶ್ರುತಂ*
*ಭೀಮಾ ದಕ್ಷಿಣ ದಿಗ್ಭಾಗೇ ಪರ್ವತೋಸ್ತಿ ಮನೋರಮಃ*
*ಸಗರಾದ್ರಿರಿತಿ ಖ್ಯಾತಃ ಹೇಮಕೂಟಸ್ಯ ಸೋದರಃ"*[1]

ಎಂಬ ಅಪೂರ್ವ ವರ್ಣನೆ 'ಸಗರ' ನಗರದ ವೈಭವ ಮತ್ತು ಪ್ರಖ್ಯಾತಿಯನ್ನು ಸಾರುತ್ತದೆ. "ಸಮ ಭೂಮಧ್ಯೆ ರೇಖೆಯಲ್ಲಿ, ಶ್ರೀಶೈಲದ ಪಶ್ಚಿಮ ದಿಕ್ಕಿಗೆ ಇರುವ, ಕೃಷ್ಣಾ ಮತ್ತು ಭೀಮಾ ನದಿಗಳ ಮಧ್ಯೆದಲ್ಲಿ ಕಂಗೊಳಿಸುವ, ಜಗತ್‌ಪಾವನ ಸ್ಥಳವಾದ, ಸೂರ್ಯವಂಶದ ಸಗರ ಚಕ್ರವರ್ತಿಯಿಂದ ನಿರ್ಮಿತಗೊಂಡಿರುವುದು 'ಸಗರ' ನಗರ; ಸಗರದ ಹೆಸರು ಜಗತ್ಪ್ರಸಿದ್ಧವಾದುದು; ಭೀಮಾ ನದಿಯ ದಕ್ಷಿಣ ದಿಕ್ಕಿನಲ್ಲಿರುವ ಪರ್ವತ ಭಾಗದಲ್ಲಿ 'ಸಗರ' ನಗರವು ಮನೋರಮವಾಗಿ ಶೋಭಿಸುತ್ತದೆ; ಸಗರ ಬೆಟ್ಟವು ಹೇಮಕೂಟದ ಸಹೋದರನೆಂದು ಖ್ಯಾತಿ ಗಳಿಸಿದೆ" ಎಂಬ ಸಮಕಾಲೀನ ವಾಸ್ತವಿಕ ನಿರೂಪಣೆ ಈ ಪದ್ಯದಲ್ಲಿದೆ. ಇಲ್ಲಿನ ನೈಸರ್ಗಿಕ ವಿವರಣೆಯು ಸಹಜ ಮತ್ತು ನೈಜವಾಗಿದೆ.

ಕ್ರಿ.ಶ.1017ರ ತಿಂಥಿಣಿ ಶಾಸನದಲ್ಲಿ "ಎಡದೊರೆ ವಿಷಯ ಪ್ರತಿವದ್ಧ ಸಗರತ್ರಿಶತ ಮಧ್ಯವರ್ತಿನಿ ಕೃಷ್ಣವೆಣ್ಣಾನದ್ಯುತರ ತೀರೋಪಾಶ್ರಿತೇ"[2] ಎಂದು ನಿರೂಪಿಸುವಲ್ಲಿ ಈ ಸಗರವು ಕ್ರಿ.ಶ.1017ರಲ್ಲಿ 300 ಹಳ್ಳಿಗಳ ಮೇಲೆ ರಾಜಧಾನಿಯಾಗಿದ್ದುದನ್ನು ತಿಳಿಸುತ್ತದೆ. ಇದು ಎಡದೊರೆನಾಡಿನ ಎದುರಿಗೆ ಕೃಷ್ಣಾನದಿ ತೀರಕ್ಕೆ ಹೊಂದಿಕೊಂಡು ಸಗರನಾಡು ಇದ್ದಿತೆಂದು ಪ್ರಾದೇಶಿಕ ಅಸ್ತಿತ್ವದ ಖಚಿತತೆ ಈ ಶಾಸನದಲ್ಲಿ ವ್ಯಕ್ತವಾಗಿದೆ.

**ಶಾಸನಗಳಲ್ಲಿ 'ಸಗರ' ಕೀರ್ತಿ**

'ಸಗರನಾಡ'ನ್ನು ಉಲ್ಲೇಖಿಸುವ ಉಪಲಬ್ಧವಾದ ಪ್ರಥಮ ಶಾಸನವೆಂದರೆ ಕ್ರಿ.ಶ.929ರ ಶಿರವಾಳ ಶಾಸನ. ಅನಂತರದಲ್ಲಿ ಹಂಡುಬರುವ ಕ್ರಿ.ಶ.1017ರ ದೋರನಹಳ್ಳಿ ಶಾಸನ, ಕ್ರಿ.ಶ.1095ರ ಯಡ್ರಾಮಿ ಶಾಸನ, ಕ್ರಿ.ಶ.1206ರ ಎಡಯಾಪುರ ಶಾಸನ, ಕ್ರಿ.ಶ.1214ರ ರಾಜನಕೋಳೂರು ಶಾಸನ, ಕ್ರಿ.ಶ.1051ರ ಬೀಮರಾಯನಗುಡಿ ಶಾಸನ, ಕ್ರಿ.ಶ.1054ರ ಕೆಂಭಾವಿ ಮತ್ತು ದಿಗ್ಗಾಂವ ಶಾಸನಗಳು, ಕ್ರಿ.ಶ.1067ರ ಸಂಗಮ ಶಾಸನ, ಕ್ರಿ.ಶ.1077ರ, 1105, 1108, 1139ರ ಕಾಲದ ಏವೂರ ಶಾಸನಗಳು, ಕ್ರಿ.ಶ.1085ರ ಹಾವಿನಾಳ ಶಾಸನ, ಕ್ರಿ.ಶ.1129, 1218ರ ಕಾಲದ ಮುದನೂರ ಶಾಸನಗಳು, ಕ್ರಿ.ಶ.1069, 1111ರ ಯಡ್ರಾಮಿ ಶಾಸನಗಳು, ಕ್ರಿ.ಶ.1069ರ ಕೊಲ್ಲೂರು ಶಾಸನಗಳು, ಕ್ರಿ.ಶ.1148ರ ಮಲ್ಲಾಬಾದ್ ಶಾಸನ, ಕ್ರಿ.ಶ.1182ರ ಹೆಮ್ಮಡಗಿ ಶಾಸನ, ಕ್ರಿ.ಶ.1148ರ ಮಲ್ಲಾಬಾದ್ ಶಾಸನ, ಕ್ರಿ.ಶ.1182ರ ಹೆಮ್ಮಡಗಿ ಶಾಸನ, ಕ್ರಿ.ಶ.1189ರ ಹುಲಿಕಲ್ ಶಾಸನ, ಕ್ರಿ.ಶ.1175ರ ಹೋತಗಲ್ ಶಾಸನ, ಕ್ರಿ.ಶ.1239ರ ಬಿಜಾಸ್ಪುರ ಶಾಸನ, ಕ್ರಿ.ಶ.1229ರ ಹಗರಟಗಿ ಶಾಸನ, ಕ್ರಿ.ಶ.1265ರ ಯಾಳಗಿ ಶಾಸನ ಹಾಗೆಯೇ ಕ್ರಿ.ಶ.12ನೆಯ ಶತಮಾನದ ಮದ್ದರ್ಕಿ, ಕಚಕನೂರ, ಮರಮ್‌ಕಲ್ ಮುಂತಾದ ಶಾಸನಗಳು[3] ರಾಜಧಾನಿ 'ಸಗರ' ಮತ್ತ ಸಗರನಾಡನ್ನು ಉಲ್ಲೆಖಿಸುವ ಐತಿಹಾಸಿಕ ದಾಖಲೆಗಳಾಗಿವೆ.[4] ಸಗರನಾಡನ್ನು ಉಲ್ಲೇಖಿಸುವ ಉಪಲಬ್ಧ ಕೊನೆಯ ಶಾಸನವೆಂದರೆ ಕ್ರಿ.ಶ.1537ರ

ಶಿರವಾಳ ಶಾಸನವಾಗಿದೆ. ಅಲ್ಲದೆ, ಕ್ರಿ.ಶ.1172ರ ಕಥೆವಾಡ ಶಾಸನ (ಇದು ಹಿಂದಿನ ತರ್ದವಾಡಿ ನಾಡು ಮತ್ತು ಇಂದಿನ ಸಿಂದಗಿ ತಾಲ್ಲೂಕಿನಲ್ಲಿರುವ ಕಡ್ಲೇವಾಡ)ದಲ್ಲಿ ಸಗರದ ಉಲ್ಲೇಖವಿದೆ.[5]

ಈ ಶಾಸನಗಳಲ್ಲಿ ಸಗರನಾಡು, ಸಗರತ್ರಿಶತ, ಸಗರಾವರ್ತ, 'ಸಗರ–300', 'ಸಗರ–500', ಸಗರ ಮಂಡಳ, ಸಗರದೇಶ, ಸಗರಾವನಿ, ಸಗರ– ಎಂದು ಮುಂತಾದ ಉಲ್ಲೇಖಗಳಿವೆ. ಇದರಿಂದ ಸಗರನಾಡು ಪ್ರಾಚೀನ ಕಾಲದಲ್ಲಿ ಮೊದಲು '300' ಹಳ್ಳಿಗಳ ನಾಡಾಗಿದ್ದು, ನಂತರ '500' ಹಳ್ಳಿಗಳ ನಾಡಾಗಿ ವಿಸ್ತರಣೆಗೊಂಡಿದೆ. 'ಸಗರ–500'ನ್ನು ಉಲ್ಲೇಖಿಸುವ ಉಪಲಬ್ಧ ಮೊದಲ ಪ್ರಾಚೀನ ಶಾಸನವೆಂದರೆ ಕ್ರಿ.ಶ.1067ರ ಸಂಗಮ ಶಾಸನವಾಗಿದೆ. ಅಂದರೆ, ಕ್ರಿ.ಶ.1067ಕ್ಕಿಂತ ಮೊದಲು 'ಸಗರ'ವು 300 ಹಳ್ಳಿಗಳಿಗೆ, ಕ್ರಿ.ಶ.1067ರ ನಂತರ '500' ಹಳ್ಳಗಳಿಗೆ ರಾಜಧಾನಿಯಾಗಿತ್ತೆಂಬುದು ಚಾರಿತ್ರಿಕ ಸಂಗತಿಯಾಗಿದೆ.

**'ಸಗರ'ದ ಇತಿಹಾಸ**

'ಸಗರ–300' ಮತ್ತು 'ಸಗರ–500' ಎಂದು ಹಲವಾರು ಶಾಸನಗಳಲ್ಲಿ ಉಲ್ಲೇಖವಿರುವುದನ್ನು ಗಮನಿಸಿದರೆ ಸಗರ ನಗರವು ಮೊದಲು 300 ಹಳ್ಳಿಗಳಿಗೆ ನಂತರ 500 ಹಳ್ಳಿಗಳ ನಾಡಿಗೆ ರಾಜಧಾನಿಯಾಗಿದ್ದು ಖಚಿತವಾದ ಸಂಗತಿ. ರಾಜಧಾನಿ ಸಗರವನ್ನು ಉಲ್ಲೇಖಿಸುವ ಮೊದಲ ಉಪಲಬ್ಧ ಶಾಸನವೆಂದರೆ, ಕ್ರಿ.ಶ.929ರ ಶಿರವಾಳ ಶಾಸನವಾಗಿದೆ; ಸಗರ ನಗರವನ್ನು ಉಲ್ಲೆಖಿಸುವ ಉಪಲಬ್ಧ ಕೊನೆಯ ಶಾಸನವೆಂದರೆ ಕ್ರಿ.ಶ.1537ರ ಶಿರವಾಳ ಶಾಸನವಾಗಿದೆ. ಇದರಿಂದ ಕ್ರಿ.ಶ.929 ರಿಂದ 1537ರವರೆಗೆ ಸಗರವು ದೆಹಲಿ ಸುಲ್ತಾನರ ದಾಳಿಯ ನಂತರವೂ ಸುಸ್ಥಿತಿಯಲ್ಲಿ ಇತ್ತೆಂಬುದು ಸ್ಪಷ್ಟವಾಗುತ್ತದೆ. ಹತ್ತನೆಯ ಶತಮಾನಕ್ಕಿಂತ ಮೊದಲು ಸಗರ ನಗರದ ಚರಿತ್ರೆಯನ್ನು ಅರಿಯಲು ಇತಿಹಾಸದ ಪುರಾವೆಗಳು ಮೌನ ತಾಳಿವೆ. ಪ್ರಾಯಶಃ ಇದು ಕ್ರಿ.ಶ.ಸು.5ನೆಯ ಶತಮಾನಕ್ಕಿಂತ ಪೂರ್ವದಿಂದಲೂ ರಾಜಧಾನಿಯಾಗಿ, ಸಾಂಸ್ಕೃತಿಕ ನೆಲೆವೀಡಾಗಿ ಇದ್ದಂತೆ ತೋರುತ್ತದೆ.

ಇಂದಿನ ಹಳೆಯ ಶಹಾಪುರ, ದೊಡ್ಡಸಗರ ಮತ್ತು ಮಧ್ಯದ ಗುಡ್ಡವನ್ನು ಒಳಗೊಂಡಂತೆ ದಿಗ್ಗಿಯವರೆಗಿನ ವಿಸ್ತಾರವಾದ ಪ್ರದೇಶದಲ್ಲಿ ಐತಿಹಾಸಿಕ ಸಗರ ನಗರ ವ್ಯಾಪಿಸಿತ್ತೆಂದು ತೋರುತ್ತದೆ. ಇಂದಿನ ಶಹಾಪುರ ಮತ್ತು ದಿಗ್ಗಿಗೆ ಹೊಂದಿಕೊಂಡಿರುವ ದಿಗ್ಗಿಯ ಗುಡ್ಡದಲ್ಲಿರುವ ಏಳು ಅಗಸಿಗಳು, ಸುತ್ತಲೂ ಕಂಡುಬರುವ ಪಾಳುಬಿದ್ದ ಕೋಟೆ ಕೊತ್ತಲಗಳು, ಗುಡ್ಡದಲ್ಲಿರುವ ಹಲವಾರು ದೇವಸ್ಥಾನ ಮತ್ತು ಇತರ ಪ್ರಾಚೀನ ಕಟ್ಟಡಗಳು ಪ್ರಾಚೀನ ಸಗರ ನಗರದ ವ್ಯಾಪ್ತಿಗೆ ಒಳಪಡುತ್ತವೆ. ಈಗಲೂ ಗುಡ್ಡದಲ್ಲಿ ಕಂಡುಬರುವ ಸಂಗಮನಾಥ, ಪ್ರಭುದೇವರ ದೇವಸ್ಥಾನಗಳು, ಏಳು ಹನುಮಂತ ದೇವರ ಗುಡಿಗಳು– ಇವೆಲ್ಲ ಸಗರ ನಗರದ ಪ್ರಾಚೀನ ಧಾರ್ಮಿಕ ವೈಭವದ ಪ್ರತೀಕವಾಗಿವೆ.[6] ಸಗರದ ಕೋಟೆಯಲ್ಲಿ ಇಂದಿಗೂ 7 ಮಹಾದ್ವಾರಗಳು, 7 ಉಕ್ಕಿನ ತೋಪುಗಳು, ಹಳಗನ್ನಡ, ಪರ್ಶಿಯನ್ನ ಮತ್ತು 01 ಅರೆಬಿಕ್ ಶಾಸನಗಳು ಐತಿಹಾಸಿಕ ಪುರಾವೆಗಳಾಗಿ ಕಂಡುಬರುತ್ತವೆ.

ಪೌರಾಣಿಕ ಕಾಲದ ಮಹಾನ್ ಚಕ್ರವರ್ತಿ ಸಗರನು ಸಗರ ನಗರವನ್ನು ನಿರ್ಮಿಸಿದನೆಂದು ಪ್ರತೀತಿ ಇದೆ. ಇತಿಹಾಸದ ದಾಖಲೆಗಳನ್ನು ಪರಿಶೀಲಿಸಿದಾಗ ಕ್ರಿ.ಶ.939ರಲ್ಲಿ ಚನ್ದಯ್ಯನು ಸಗರನಾಡಿನ ನಾಳ್ಗಾವುಂಡ (=ನಾಡಗೌಡ) ಆಗಿದ್ದನೆಂದು ಶಿರವಾಳ ಶಾಸನವು ಉಲ್ಲೇಖಿಸುತ್ತದೆ.[7] ಸಗರನಾಡನ್ನು ಸುಮಾರು ಮೂರು ಶತಮಾನಗಳವರೆಗೆ ನಿರಂತರವಾಗಿ ಆಳಿದವರು ಅಹಿಹಯ ವಂಶದ ಅರಸರು. ಈ ವಂಶದಲ್ಲಿ ಕ್ರಮವಾಗಿ

ಚಂದಯ್ಯ–ಅವನ ಮಗ ನಿಂಬಯ್ಯ, ನಿಂಬಯ್ಯನ ಮಕ್ಕಳಾದ ಚಂದಭೂಪಾಲ–ಖಖ ಮತ್ತು ಅಲ್ಲಮುಲಿ, ನಂತರ ಚಂದಭೂಪಾಲನ ಮಗ ರೇವರಸ (ಕ್ರಿ.ಶ.1054) ಅವನ ರಾಣಿ ಮಾಳಿಯಬ್ಬರಸಿ– ಹೀಗೆ ಈ ವಂಶದ ವಿವರವು ಕ್ರಿ.ಶ.1054ರ ಕೆಂಭಾವಿ ಶಾಸನದಲ್ಲಿ ಬರುತ್ತದೆ.[8] ರೇವರಸನ ನಂತರ ಅವನ ಮಗ ಭೋಗದೇವನು ಅಧಿಕಾರ ನಡೆಸಿದ ಸಂಗತಿಯನ್ನು ಕ್ರಿ.ಶ.1106ರ ದೇವರಗೋನಾಲ ಶಾಸನ ಉಲ್ಲೇಖಿಸುತ್ತದೆ.[9] ಕ್ರಿ.ಶ.939ರ ಶಿರವಾಳ ಶಾಸನ ಉಲ್ಲೇಖಿಸುವ ಚಂದಯ್ಯನು ಸಗರನಾಡಿನ ನಾಡಗೌಡನಾಗಿದ್ದನು. ಆದರೆ ಈತನ ಮೊಮ್ಮಗ (ಮಗ ನಿಂಬಯ್ಯನ ಮಗ)ನಾದ ಇಮ್ಮಡಿ ಚಂದಭೂಪಾಲನು ಚನ್ದಭೂಪ, ಚೌಂಡರಾಯ, ಚನ್ದರಸ, ಚಂದಿಮಯ್ಯ ಎಂಬ ಹಲವು ಹೆಸರುಗಳಿಂದ ವಿವಿಧ ಶಾಸನಗಳಲ್ಲಿ ವರ್ಣಿಸಲ್ಪಟ್ಟಿದ್ದಾನೆ. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ, ಕ್ರಿ.ಶ.939ರಲ್ಲಿ ಅಹಿಹಯ ವಂಶದ ಚಂದಯ್ಯನು ಸಗರನಾಡಿನ ನಾಡಗೌಡನಾಗಿದ್ದರೆ, ಕ್ರಮೇಣ ಈ ವಂಶದವರು ಈ ನಾಡಿನ ರಾಜರಾಗಿ ಕೀರ್ತಿ ಸಂಪಾದಿಸಿದ್ದಾರೆ.

ಈ ವಂಶದಲ್ಲಿ ಬರುವ ಇಮ್ಮಡಿ ಚಂದಭೂಪಾಲ(ಕ್ರಿ.ಶ.1014)ನು ಬಹುದೊಡ್ಡ ಮಹಿಮಾನ್ವಿತ ಶಿವಶರಣನಾಗಿದ್ದನೆಂದು ಸಗರನಾಡಿನ ಹಲವು ಶಾಸನಗಳು ಬಣ್ಣಿಸುತ್ತವೆ. ಬಂದರವಾಡ ಶಾಸನದಲ್ಲಿ "ಪ್ರಿಯವಾಕ್ಯಂ ಚಂದಿಮಯ್ಯಂ ಜನಕನನುಪಮಾಜಾಯ್ಯಬಯಕ್ಕಂ ಜಯಕರ್ಣ್ನಂ ಸ್ವಾಮಿ ಮಹೇಶ್ವರೇ ಕೆಳೆಯರಾತಪ್ಪ ದೈವಂ ಶಿವಂ ನನ್ನಿಯ ವಾಕ್ಯಂ ಕಾಸ್ಯಪಗೋತ್ರದೊಳೆನೆ ಧರೆಗೆಸೆದ ಧನ್ಯನೆಂ"[10] ಎಂದೂ; ಕ್ರಿ.ಶ.1095ರ ಯಡ್ರಾಮಿ ಶಾಸನದಲ್ಲಿ "ಕೇವಳಮಲ್ತು ಶಂಭು ಸದ್‌ಭಕ್ತಿಯದೆಂತೆನೆ ಚೌಂಡರಾಯನೆಂಬಾ ವಿಭುವಿಂಗಿರುಳ್ಕನಸಿನೊಳ್ ಯತಿರೂಪದೇ ಬಂದು ನಿಂದು ಕೆಂಭಾವಿಯ ಬಟ್ಟೆಯೆಡೆಯಿಂದ ಬಾವಿಯ ಪುತ್ತಿನಲ್ಲಿ ನೀಂ ಭಾವಿಸಿ ತೋಡಿ ನೋಡು ಗಡ ಕಾಣ್ಬನ್ನಗಳ ಸ್ವಯಂಭುಮಂ ಕಣ್ದು ಸ್ವಯಂಭುವೆಂದರಿದಾರೋಗಿಸಿ ಮರ್ದ್ದೇಳ್ವಂ ನಿಧಾನಮಂ ಕಣ್ಡವೋಲರ್ತ್ಥಿಯಿಂ ನಲಿದು ಪೀಠಮನಿಕ್ಕಿಸಿ ದೇಗುಲಕ್ಕೆ ಮುಂ ಕೊಣ್ಡದನೆಯ್ದೆ ತನ್ನನ್ನೋಳಳಕಿಲ್ಲದೆ ಮಾಡಿಸಿದಂ ಬಬಾಪ್ಪುಚಾಮುಣ್ಡನಶೇಷ ಸದ್ಗುಣಕರಣ್ಡನಿದೇಂ ಕ್ರಿತಕೃತ್ಯನಾನೊ॥"[11] ಎಂದೂ; ಕ್ರಿ.ಶ.1067ರ ಮುಡಬೂಳ ಶಾಸನದಲ್ಲಿ "ಶ್ರೀಮಚನ್ದರಸರು"[12] ಎಂದೂ; ಕ್ರಿ.ಶ.12ನೆಯ ಶತಮಾನದ ಯಡ್ರಾಮಿ ಶಾಸನದಲ್ಲಿ "......ಭೀಮಾನಂ ಸ್ವಯಮೆನೆ ನೆಗಳ್ದಂ ಚನ್ದಭೂಪಂ"[13] ಎಂದೂ ಮನದುಂಬಿ ವರ್ಣಿಸಲಾಗಿದೆ. ಮೂಲತಃ ಕಾಸ್ಯಪಗೋತ್ರದವರಾಗಿದ್ದ ಈ ಅಹಿಹಯ ವಂಶದವರು ಈ ಚಂದಭೂಪಾಲನ ಕಾಲದಲ್ಲಿ ಶಿವಭಕ್ತರಾದ ಸನ್ನಿವೇಶಕ್ಕೆ ಈ ಶಾಸನಗಳು ಚಾರಿತ್ರಿಕ ದಾಖಲೆಗಳಾಗಿವೆ. ಶರಣ ಕೆಂಭಾವಿ ಭೋಗಣ್ಣನ ಪ್ರಭಾವದಿಂದ ದೊರೆ ಚಂದಿಮರಸನೇ ಶಿವಶರಣನಾದನೆಂಬ ಸಂಗತಿಯನ್ನು ಹರಿಹರ ಕವಿಯ 'ಕೆಂಭಾವಿ ಭೋಗಣ್ಣನ ರಗಳೆ' ಮೊದಲ್ಗೊಂಡು ಹಲವಾರು ವೀರಶೈವ ಕಾವ್ಯಗಳು ನಿರೂಪಿಸುತ್ತವೆ. ಈ ಅಹಿಹಯ ವಂಶದ ಅರಸರು ಕ್ರಿ.ಶ.939 ರಿಂದ ಕ್ರಿ.ಶ.1106ರವರೆಗೆ ಸಗರನಾಡನ್ನು ಆಳಿದ ಬಗೆಗೆ ಹಲವಾರು ಶಾಸನ ಉಲ್ಲೇಖಗಳು ಲಭಿಸುತ್ತವೆ. ಇದಕ್ಕಿಂತಲೂ ಪೂರ್ವಕಾಲದ ಮತ್ತು ಉತ್ತರ ಕಾಲದ ಪುರಾವೆಗಳು ಲಭ್ಯವಿಲ್ಲದೆ ಸ್ತಬ್ದವಾಗಿವೆ.

ಕ್ರಿ.ಶ.1265ರ ಯಾದವರ ಕಾಲದ ಯಾಳಗಿ ಶಾಸನದಲ್ಲಿ "......॥ ಸ್ವಸ್ತಿ ಮತು ಪ್ರತಿಗಂಡಭೈರವ ಸಗರವೈನೂರ್ಬ್ಬಾಡದ ಇಂಮಡಿ ಗಣಪತಿರಡ್ಡಿಯರು ಏಳಗೆಯ ಮಹಾಪ್ರಭುಗಳು......"[14] ಸೇರಿಕೊಂಡು

ಏಳಗೆಯ ಚೆನ್ನಕೇಶ್ವರ ದೇವರಿಗೆ ಭೂದಾನ ನೀಡಿದ ವಿವರಣೆ ಇದೆ. ಇಲ್ಲಿ ಬರುವ 'ಸಗರವೈನೂರ್ಬ್ಬಾಡದ ಇಮ್ಮಡಿ ಗಣಪತಿರಡ್ಡಿ' ಸಗರ ರಾಜಧಾನಿಯಿಂದ 'ಸಗರ–500 ಪ್ರದೇಶವನ್ನು ಆಳುತ್ತಿದ್ದನೆಂಬ ಸಂಗತಿ ಸ್ಪಷ್ಟವಾಗುತ್ತದೆ. ಈತ ಅಹಿಹಯ ವಂಶದವನೇ ಅಥವಾ ಬೇರೆ ವಂಶಕ್ಕೆ ಸೇರಿದವನೇ? ಎಂಬುದನ್ನು ಅರಿಯಲು ಸೂಕ್ತ ಸಾಕ್ಷಾಧಾರಗಳು ಉಪಲಬ್ಧವಿಲ್ಲ. ಕ್ರಿ.ಶ.1278ರ ಆಂದೋಲ ಶಾಸನಲ್ಲಿ "ಸಗರದ ಪುದೀಸ್ವರಂ ರಾಯಜೋಧನಾರಾಯಣ ನಾರಾಯಣ ದೇವನಾಯಕಸ"[15] ಎಂಬ ಉಲ್ಲೇಖ ಇರುವುದರಿಂದ ಈ ಶಾಸನದ ಕಾಲದಲ್ಲಿ ನಾರಾಯಣ ದೇವನಾಯಕನು ಸಗರಪುರವನ್ನು ಆಳುತ್ತಿದ್ದ ಸಂಗತಿ ತಿಳಿಯುತ್ತದೆ.

ದೇವಗಿರಿ ಯಾದವರ ವಶದಲ್ಲಿದ್ದ ಸಗರವು ಅಲ್ಲಾವುದ್ದೀನ್ ಖಿಲ್ಜಿಯ ದಾಳಿಯಿಂದಾಗಿ ದೆಹಲಿ ಸುಲ್ತಾನರ ವಶಕ್ಕೆ ಸೇರುತ್ತದೆ. ಇದನ್ನು ಕ್ರಿ.ಶ.1300–1310ರ ಫಾರಸಿ ಶಾಸನಗಳು ಉಲ್ಲೇಖಿಸುತ್ತವೆ.[16] ನಂತರ ಮಹಮ್ಮದ ತುಘಲಕ್‌ನು ತನ್ನ ಅಳಿಯ ಬಾಹುದ್ದೀನನಿಗೆ ಸಗರ ಪ್ರದೇಶವನ್ನು ಜಹಗೀರಾಗಿ ಕೊಡುತ್ತಾನೆ. ಬಾಹುದ್ದೀನನು ದೆಹಲಿ ಸುಲ್ತಾನನಿಗೆ ವಿರುದ್ಧನಾದ ಮೇಲೆ ತುಘಲಕ್‌ನು ಸಗರ ಪ್ರದೇಶದ ಮೇಲೆ ದಾಳಿ ಪುನಃ ಅದನ್ನು ಕೈವಶ ಮಾಡಿಕೊಳ್ಳುತ್ತಾನೆ. ಕ್ರಿ.ಶ.1347ರಲ್ಲಿ ಗುಲಬರ್ಗಾ ರಾಜಧಾನಿ ಮಾಡಿಕೊಂಡು ಬಹಮನಿ ಸಾಮ್ರಾಜ್ಯ ಸ್ಥಾಪನೆಯಾದ ಮೇಲೆ ಸಗರವು ಅದರ ವ್ಯಾಪ್ತಿಗೆ ಒಳಪಡುತ್ತದೆ. 15ನೆಯ ಶತಮಾನದ ಕೊನೆಯ ಭಾಗದಲ್ಲಿ ಬಹಮನಿ ಸಾಮ್ರಾಜ್ಯ ಒಡೆದು ಬಿರಾರ್, ಅಹಮ್ಮದನಗರ, ಬಿಜಾಪುರ, ಗೋಲ್ಕಂಡ ಮತ್ತು ಬೀದರ್ ಶಾಹೀ ರಾಜ್ಯಗಳು ಹುಟ್ಟಿಕೊಂಡ ಮೇಲೆ ಸಗರ ಪ್ರದೇಶವು ಬಿಜಾಪುರದ ಆದಿಲ್‌ಶಾಹಿಗಳ ಪಾಲಾಗುತ್ತದೆ. ಮುಂದೆ ವಿಜಯನಗರ ಸಾಮ್ರಾಜ್ಯದ ವಶಕ್ಕೆ ಸೇರುತ್ತದೆ. ಪ್ರೌಢದೇವರಾಯನಿಂದ ಅಳಿಯ ರಾಮರಾಯನ ಕಾಲದವರೆಗೂ ಸಗರವು ವಿಜಯನಗರದ ವಶದಲ್ಲಿತ್ತು. ವಿಜಯನಗರದ ಚಕ್ರವರ್ತಿ ಕೃಷ್ಣದೇವರಾಯನು ಸಗರಕೋಟೆಯಲ್ಲಿ ಯುದ್ಧ ಮಾಡಿದನೆಂದು ವಿದ್ವಾಂಸರ ಅಭಿಪ್ರಾಯವಿದೆ.[16] ಅಳಿಯ ರಾಮರಾಯನಿಗೆ 'ಸಗರ ಸಂಕ್ರಮಣರಾಯ'ನೆಂದು ಬಿರುದು ಇದ್ದುದಾಗಿ ಕೈಫಿಯತ್ತುಗಳು ತಿಳಿಸುತ್ತವೆ. ಕ್ರಿ.ಶ.1300ರಿಂದ ಪದೇ ಪದೇ ಮಹಮ್ಮದೀಯರ ದಾಳಿಗಳಿಗೆ ತುತ್ತಾಗುತ್ತಾ ಬಂದ ಸಗರವನ್ನು ಕ್ರಿ.ಶ.ಸು.1500ರ ಸಂದರ್ಭದಲ್ಲಿ ಸಂಪೂರ್ಣವಾಗಿ ಮುಸ್ಲೀಮರ ವಶವಾಗುವುದನ್ನು ತಪ್ಪಿಸಿ, ಸಂರಕ್ಷಿಸಿದ ಕಾರಣಕ್ಕಾಗಿ ವಿಜಯನಗರದ ದೊರೆ ಅಳಿಯ ರಾಮರಾಯನನ್ನು 'ಸಗರ ಸಂಕ್ರಮಣರಾಯ'ನೆಂದು ಕರೆಯಲಾಗಿದೆ. ಆದರೆ ಕ್ರಿ.ಶ.1565ರಲ್ಲಿ ನಡೆದ ರಕ್ಕಸ ತಂಗಡಗಿಯ ನಿರ್ಣಾಯನ ಯುದ್ಧದಲ್ಲಿ ಅಳಿಯ ರಾಮರಾಯನ ವೀರಮರಣದೊಂದಿಗೆ ವಿಜಯನಗರ ಸಾಮ್ರಾಜ್ಯವು ಶಕ್ತಿಹೀನವಾಗಿ ಕಳೆಗುಂದುತ್ತದೆ. ಆಗ ದಕ್ಷಿಣ ಭಾರತದಲ್ಲಿ ಬಲಾಢ್ಯ ರಾಜಕೀಯ ಶಕ್ತಿಯಾಗಿ ಶಾಹೀರಾಜ್ಯಗಳು ಹೊರಹೊಮ್ಮುತ್ತವೆ. ಅವುಗಳಲ್ಲಿ ಬಿಜಾಪುರದ ಆದಿಲ್‌ಶಾಹಿ ರಾಜ್ಯವೂ ಒಂದು.

ಕ್ರಿ.ಶ.ಸು.1300ರಿಂದ ಪದೇ ಪದೇ ಮಹ್ಮದೀಯರ ದಾಳಿಗೆ ಒಳಗಾಗುತ್ತಾ ಬಂದ ಸಗರವು ಕ್ರಮೇಣವಾಗಿ ತನ್ನ ಐತಿಹಾಸಿಕ ವೈಭವವನ್ನು ಕಳೆದುಕೊಳ್ಳುತ್ತಾ ಬಂದಿತ್ತು. ಅನಂತರದಲ್ಲಿ ಅಧಿಕಾರಕ್ಕೆ ಬಂದ ಬಿಜಾಪುರದ ಆದಿಲ್‌ಶಾಹಿ ಅರಸರು ಸಗರ ನಗರವನ್ನು ವಿನಾಶಕ್ಕೆ ದೂಡಿ ಅಳಿದುಳಿದ ನಗರಕ್ಕೆ ಷಹಪುರ(ಶಹಾಪುರ)ವೆಂದು ತಮ್ಮ ಹೆಸರನಿಂದ ಕರೆದುಕೊಂಡರು; ಅಲ್ಲದೆ ಕ್ರಿ.ಶ.1668ರಲ್ಲಿ ಸಗರನಾಡಿನ ಪ್ರದೇಶಕ್ಕೆ 'ನಸರತಾಬಾದ್' ಎಂದು ಹೆಸರನಿಟ್ಟರು. ಸಗರದ ಮೇಲೆ ಮಹಮ್ಮದೀಯರು ನಡೆಸಿದ್ದು ಕೇವಲ ರಾಜಕೀಯ ಆಕ್ರಮಣವಷ್ಟೇ ಅಲ್ಲ; ಅದೊಂದು ಸಾಂಸ್ಕೃತಿಕ ಆಕ್ರಮಣ. ಪರಂಪರಾಗತವಾಗಿ ಸಾವಿರಾರು

ವರ್ಷಗಳಿಂದ ಕಟ್ಟುತ್ತಾ ಬಂದಿದ್ದ ಸಗರದ ವೈಭವದ ಸಂಸ್ಕೃತಿಯನ್ನು ಹೀನಾಯವಾಗಿ ನಾಶಗೊಳಿಸಿದ ಅಪಕೀರ್ತಿ ಯವನರದಾಗಿದೆ. ಕೇವಲ ಸಗರ ನಗರವಷ್ಟೇ ಅಲ್ಲ, ಸಗರನಾಡಿನ ಪ್ರಾಚೀನ ಪ್ರಸಿದ್ಧ ಸಾಂಸ್ಕೃತಿಕ ಕೇಂದ್ರಗಳಾದ ಶಿರವಾಳ, ಗೋಗಿ, ಮದ್ದರಕಿ, ಮುಡಬೂಳ, ಏವೂರು, ಯಡ್ರಾಮಿ, ಕೆಂಭಾವಿ, ಮುದನೂರ– ಮುಂತಾದ ಊರುಗಳಲ್ಲಿನ ಪ್ರಾಚೀನ ದೇವಸ್ಥಾನಗಳು, ಸುಂದರವಾದ ಶಿಲ್ಪಕಲೆಗಳು, ಮೂರ್ತಿಶಿಲ್ಪಗಳನ್ನು ಭಗ್ನಗೊಳಿಸಿದ ಮನಸ್ಥಿತಿಯೇ ಧಾರ್ಮಿಕ–ಸಾಂಸ್ಕೃತಿಕ ವೈರುಧ್ಯದ ವಿಕೃತಿಯಾಗಿದೆ.

ಹೀಗೆ ಸುಮಾರು 800 ವರ್ಷಗಳವರೆಗೆ ಒಂದು ನಾಡಿನ ರಾಜಧಾನಿಯಾಗಿ ವೈಭವದಿಂದ ಮೆರೆದ ಸಗರ ನಗರ ಯವನರ ದುರಾಕ್ರಮಣಕ್ಕೊಳಗಾಗಿ ಪಾಳುಬಿದ್ದು ಇಂದು 'ಶಹಪುರ'ವಾಗಿ ಉಳಿದಿರುವುದು ಒಂದು ದಾರುಣ ಚರಿತ್ರೆಯೇ ಆಗಿದೆ. ಆದರೆ ಆ ಪ್ರದೇಶದ ಜನರು ಮಾತ್ರ ತಾವು ಸಗರನಾಡಿನವರೆಂದು ಈಗಲೂ ಹೆಮ್ಮೆಯಿಂದ ಹೇಳಿಕೊಳ್ಳುವುದರಲ್ಲಿ ಸಾಂಸ್ಕೃತಿಕ ಅಸ್ಮಿತೆಯ ಜೀವಂತಿಕೆಯಾಗಿದೆ.

**ಕೊನೆಟಿಪ್ಪಣಿಗಳು**

1. ಕೃಷ್ಣ ಎ. (ಪ್ರ.ಸಂ). (1985). ಸಗರನಾಡ ದರ್ಶನ–ಪ್ರಸ್ತಾವನೆ. ಪು.10.
2. ಹನುಮಾಕ್ಷಿ ಗೋಗಿ (ಸಂ.) (1995). ಸುರಪುರ ತಾಲೂಕಿನ ಶಾಸನಗಳು. ಪು.87,
3. ಹನುಮಾಕ್ಷಿ ಗೋಗಿ (ಸಂ.). (1995). ಸುರಪುರ ತಾಲೂಕಿನ ಶಾಸನಗಳು ಮತ್ತು ಕಲ್ಬುರ್ಗಿ ಜಿಲ್ಲೆಯ ಶಾಸನಗಳು.
4. ರಾಮರಡ್ಡಿ ಎಸ್ ರಡ್ಡೇರ. (2022). ಸಗರನಾಡಿನ ಶಿವಶರಣರು.
5. ವೀರೇಶ ಬಡಿಗೇರ. (2000). ಸಿಂದಗಿ ಸ್ಥಳೀಯ ಇತಿಹಾಸ. ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ. ಪು.13.
6. ಅನುಪಮಾ ಆದಾಪುರ. (2012). ಅಮರಕಲ್ಯಾಣ ಸಾಂಸ್ಕೃತಿಕ ಅಧ್ಯಯನ. ಶ್ರೀಪ್ರಭುದೇವರ ಜನಕಲ್ಯಾಣ ಸಂಸ್ಥೆ, ಶ್ರೀ ಪ್ರಭುದೇವರ ಸಂಸ್ಥಾನ ವಿರಕ್ತಮಠ, ಸೊಂಡೂರು. ಪು.9.
7. ಹನುಮಾಕ್ಷಿ ಗೋಗಿ (ಸಂ.) (1996). ಕಲ್ಬುರ್ಗಿ ಜಿಲ್ಲೆಯ ಶಾಸನಗಳು. ಶಿವಚಂದ್ರ ಪ್ರಕಾಶನ, ನವನಗರ, ಹುಬ್ಬಳ್ಳಿ. ಪು. 437
8. ಹನುಮಾಕ್ಷಿ ಗೋಗಿ (ಸಂ.). (1995). ಸುರಪುರ ತಾಲೂಕಿನ ಶಾಸನಗಳು. ಪು. 68–72.
9. ಅದೆ, ಪು. 93.
10. ಹನುಮಾಕ್ಷಿ ಗೋಗಿ (ಸಂ.). (1996). ಕಲ್ಬುರ್ಗಿ ಜಿಲ್ಲೆಯ ಶಾಸನಗಳು. ಪು. 19.
11. ಅದೇ, ಪು. 346.
12. ಅದೇ, ಪು. 427.
13. ಅದೇ, ಪು. 362.
14. ಹನುಮಾಕ್ಷಿ ಗೋಗಿ (ಸಂ.) (1995). ಸುರಪುರ ತಾಲೂಕಿನ ಶಾಸನಗಳು. ಪು. 154–155.

15. ಹನುಮಾಕ್ಷಿ ಗೋಗಿ (ಸಂ.) (1996). ಕಲ್ಬುರ್ಗಿ ಜಿಲ್ಲೆಯ ಶಾಸನಗಳು. ಪು. 285.
16. ಕಪಟರಾಳ ಕೃಷ್ಣರಾವ. (1977). ಸುರಪುರ ಸಂಸ್ಥಾನದ ಇತಿಹಾಸ. ಪು. 12.
17. ಸಗರ ಕೃಷ್ಣಾಚಾರ್ಯ.( 1994). ಶಹಾಪುರ ದರ್ಶನ. ಪು. 6.

**ಪರಾಮರ್ಶನ ಗ್ರಂಥಗಳು**

- ಕೃಷ್ಣ ಎ. (ಪ್ರ.ಸಂ) (1985). ಸಗರನಾಡ ದರ್ಶನ. ಮಹಾಕವಿ ಲಕ್ಷ್ಮೀಶ ವಾಚನಸಂಘ, ಸುರಪುರ.
- ಹನುಮಾಕ್ಷಿ ಗೋಗಿ (ಸಂ.) (1995). ಸುರಪುರ ತಾಲೂಕಿನ ಶಾಸನಗಳು. ಮಹಿಳಾ ಸಾಹಿತ್ಯಿಕಾ, ನವನಗರ, ಹುಬ್ಬಳ್ಳಿ. ಪು. 154–155.
- ಸೂರ್ಯನಾಥ ಕಾಮತ್ (ಪ್ರ.ಸಂ.) (1984). ಕರ್ನಾಟಕ ರಾಜ್ಯ ಗ್ಯಾಸೆಟಿಯರ್–ಭಾಗ–1, ಕರ್ನಾಟಕ ಸರಕಾರ, ಬೆಂಗಳೂರು.
- ಕಪಟರಾಳ ಕೃಷ್ಣರಾವ. (1977). ಸುರಪುರ ಸಂಸ್ಥಾನದ ಇತಿಹಾಸ. ಮಂಜುನಾಥ ಪ್ರಕಾಶನ, ರಾಜಾಜಿನಗರ, ಬೆಂಗಳೂರು.
- ವೀರೇಶ ಬಡಿಗೇರ. (2000). ಸಿಂದಗಿ ಸ್ಥಳೀಯ ಇತಿಹಾಸ. ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ. ಪು.13.

## ಅನುಬಂಧ–1

## ಸಗರ ನಗರದ ಪ್ರಾಚೀನ ಅವಶೇಷಗಳು

